**<u>ದಿನಾಂಕಃ 15.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಕೆ.ಪಿ.ಎಂ. ವಕೀಲರಿಂದಃ</u>**

ಸಾಕ್ಷಿಯು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣಾ ಹೇಳಿಕೆಯನ್ನು ಪ್ರಮಾಣ ಪತ್ರ ರೂಪದಲ್ಲಿ ಸಲ್ಲಿಸಿದ್ದು ಅದರಲ್ಲಿನ ಎಲ್ಲಾ ಸಂಗತಿಗಳು ತಮಗೆ ತಿಳಿದಿದೆ ಮತ್ತು ಸತ್ಯವಾಗಿದೆ ಎಂದು ಹೇಳಿ, ಪ್ರಮಾಣ ಪತ್ರದಲ್ಲಿನ ಸಹಿ ತಮ್ಮದೆಂದು ಗುರುತಿಸಿರುತ್ತಾರೆ.

ನಾನು ಈ ದಿನ ನನ್ನ ಪರವಾಗಿ ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸುತ್ತಿದ್ದೇನೆ.

1) ದಿಃ17.06.2000 ರ ಶುದ್ಧ ಕ್ರಯ ಪತ್ರವನ್ನು ನಿಪಿ.1 ಎಂದು,

2) ದಿಃ20.05.2004 ರ ಶುದ್ಧ ಕ್ರಯ ಪತ್ರವನ್ನು ನಿಪಿ.2 ಎಂದು,

3) ದಿಃ12.08.2011 ರ ಶುದ್ಧ ಕ್ರಯ ಪತ್ರವನ್ನು ನಿಪಿ.3 ಎಂದು,

4) ಕೈಬರಹದ ಇಸಿ ಅನ್ನು ನಿಪಿ.4 ಎಂದು,

5) ಎರಡು ಇಸಿ ಗಳನ್ನು ನಿಪಿ.5 ಮತ್ತು 6 ಎಂದು,

6) ಒಂದು ಇ-ಖಾತಾವನ್ನು ನಿಪಿ.7 ಎಂದು,

7) ಡಿಮ್ಯಾಂಡ್ ರಿಜಿಸ್ಟರ್ ಅನ್ನು ನಿಪಿ.8 ಎಂದು,

8) ಎರಡು ಕಂದಾಯ ರಶೀದಿಗಳನ್ನು ನಿಪಿ.9 ಮತ್ತು 10 ಎಂದು,

9) ನಗರಸಭೆ, ಚನ್ನಪಟ್ಟಣ ರವರು ನೀಡಿರುವ ಸ್ವೀಕೃತಿಯನ್ನು ನಿಪಿ.11 ಎಂದು,

10) ಚನ್ನಪಟ್ಟಣ ಪುರ ಪೊಲೀಸ್ ಠಾಣೆಯವರು ನೀಡಿರುವ ಸ್ವೀಕೃತಿಯನ್ನು ನಿಪಿ.12 ಎಂದು,

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.**
**ನ್ಯಾಯಾಲಯ, ಚನ್ನಪಟ್ಟಣ.**